ಕರ್ನಾಟಕ ಸರ್ಕಾರ

ಸಾರಿಗೆ ಇಲಾಖೆ

# ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ,

# ಆಳಂದ ತನಿಖಾ ಠಾಣೆ, ಆಳಂದ, ಕಲಬುರಗಿ ಜಿಲ್ಲೆ.

ಕಛೇರಿ ಪ್ರಾರಂಭವಾದ ವರ್ಷ 1991

# ಮಾಹಿತಿ ಹಕ್ಕು ಕಾಯಿದೆ ಅಧಿನಿಯಮ 2005ರ

# 4(1)(ಬಿ) ದಾಖಲೆಗಳ ವಿವರ

# (31.12.2021 ರಲ್ಲಿರುವಂತೆ)

**ಮಾಹಿತಿ ಹಕ್ಕು ಅಧಿನಿಯಮ-2005 ಅಧ್ಯಾಯ 2 ನಿಯಮ 4(1)ಬಿ ಪ್ರಕಾರ ಪ್ರಕಟಿಸಿದ ಮಾಹಿತಿ.**

**ಈ ತನಿಖಾ ಠಾಣೆಯಲ್ಲಿ ಮುಖ್ಯವಾಗಿ ಈ ಕೆಳಗೆ ನಮೂದಿಸಿದ ಅಂಶಗಳ ಅಡಿಯಲ್ಲಿ ಕಾರ್ಯನಿರ್ವಹಿಸಲಾಗುವುದು.**

1.1 ಎಲ್ಲಾ ತರಹದ ವಾಹನಗಳನ್ನು ತನಿಖಾ ಠಾಣೆಯಲ್ಲಿ ತನಿಖೆಗೆ ಒಳಪಡಿಸಿ ನ್ಯೂನತೆ ಕಂಡು ಬಂದಲ್ಲಿ ಕಾನೂನು ರೀತಿ ಕ್ರಮ ವಹಿಸುವದು

1.2 ಹೊರ ರಾಜ್ಯಗಳಿಂದ ಪರವಾನಿಗೆ ಇಲ್ಲದೆ ಬರುವ ಸರಕು ಸಾಗಣೆ ಹಾಗೂ ಪ್ರಯಾಣಿಕ ವಾಹನಗಳಿಗೆ ರಹದಾರಿಗಳನ್ನು ನೀಡಲಾಗುವುದು.

1.3 ಮೋಟಾರು ವಾಹನಗಳ ತೆರಿಗೆ ಸಂಗ್ರಹಣೆ.

1.4 ಕೇಂದ್ರ ಮೋಟಾರು ವಾಹನ ಕಾಯ್ದೆ 1988. ಕೇಂದ್ರ ಮೋಟಾರು ನಿಯಮಗಳು 1989ರ ಅಡಿಯಲ್ಲಿ ಕಾರ್ಯನಿರ್ವಹಿಸುವುದು.

1.5 ಕರ್ನಾಟಕ ಮೋಟಾರು ವಾಹನ ನಿಯಮ 1989 ರ ಅಡಿಯಲ್ಲಿ ಕಾರ್ಯ ನಿರ್ವಹಿಸುವುದು.

1.6 ಕರ್ನಾಟಕ ಮೋಟಾರು ವಾಹನ ತೆರಿಗೆ ಕಾಯ್ದೆ ಮತ್ತು ನಿಯಮಗಳು 1957 ಮತ್ತು ಸಂಬಂಧಿಸಿದ ತಿದ್ದುಪಡಿಗಳ ಅಡಿಯಲ್ಲಿ ಕಾರ್ಯನಿರ್ವಹಿಸುವುದು.

1.7 ರಸ್ತೆ ಸುರಕ್ಷತೆಯ ಬಗ್ಗೆ ಅರಿವು ಮೂಡಿಸುವ ಕಾರ್ಯ ನಿರ್ವಹಿಸುವುದು.

1.8 ವಾಯು ಮಾಲಿನ್ಯದ ಬಗ್ಗೆ ಅರಿವು ಮೂಡಿಸುವ ಕಾರ್ಯ ನಿರ್ವಹಿಸುವುದು.

**2) ಅದರ ಅಧಿಕಾರಿಗಳ ಮತ್ತು ನೌಕರರ ಅಧಿಕಾರಿಗಳನ್ನು ಮತ್ತು ಕರ್ತವ್ಯಗಳು**

**ಕಛೇರಿ ವಿಳಾಸ :-** ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ ಹಾಗೂ ಹೆಚ್ಚುವರಿ ಕಾರ್ಯದರ್ಶಿ ಪ್ರಾದೇಶಿಕ ಸಾರಿಗೆ ಪ್ರಾಧಿಕಾರ ಕಲಬುರಗಿ ಹಾಗೂ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಆಳಂದ ತನಿಖಾ ಠಾಣೆ ಆಳಂದ ಕಲಬುರಗಿ ಜಿಲ್ಲೆ.

**2.1) ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು :-** ಕಛೇರಿ ಮುಖ್ಯಸ್ಥರಾಗಿದ್ದು, ಕಛೇರಿಯ ಸಂಪೂರ್ಣ ಜವಾಬ್ದಾರಿ ನಿರ್ವಹಿಸುತ್ತಾರೆ. ಕಛೇರಿಯ ಯಾವುದೇ ಕೆಲಸಕ್ಕೆ ಸಂಬಂದಿಸಿದಂತೆ ಅಂತಿಮ ತೀರ್ಮಾನ ತೆಗೆದುಕೊಳ್ಳುವ ಅಧಿಕಾರ ಹೊಂದಿರುತ್ತಾರೆ. ಸಿಬ್ಬಂದಿಯ ಮತ್ತು ಕೆಲಸ ಕಾರ್ಯಗಳ ಮೇಲುಸ್ತುವಾರಿ ನಿಯಂತ್ರಣ, ಪರವಾನಗಿ ನೀಡುವದು ಮುಂತಾದವು, ಹಾಗೆಯೇ ಹೆಚ್ಚುವರಿ ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಕಾರ್ಯದರ್ಶಿ ಹಾಗೂ ಸಾರ್ವಜನಿಕ ಮಾಹಿತಿ ಅಧಿಕಾರಿಯಾಗಿಯೂ ಸಹ ಕಾರ್ಯ ನಿರ್ವಹಿಸುತ್ತಾರೆ.

**2.2) ಹಿರಿಯ / ಮೋಟಾರು ವಾಹನ ನಿರೀಕ್ಷಕರು:-** ತನಿಖಾ ಠಾಣೆಯಿಂದ ಹಾದು ಹೋಗುವ ಎಲ್ಲಾ ವರ್ಗದ ವಾಹನಗಳನ್ನು ತನಿಖೆಗೆ ಒಳಪಡಿಸಿ ನ್ಯೂನತೆ ಕಂಡು ಬಂದಲ್ಲಿ ಕಾನೂನು ರೀತಿಯ ಕ್ರಮವಹಿಸಿ ರಾಜಸ್ವ ಸಂಗ್ರಹಣೆ ಮಾಡುವುದು. (ಹೊರ ರಾಜ್ಯದಿಂದ ಪರವಾನಿಗೆ ಇಲ್ಲದೇ ಪ್ರವೇಶಿಸುವ ವಾಹನಗಳಿಗೆ ಪರವಾನಿಗೆ ನೀಡುವುದು) ವಾಹನಗಳ ಸಂಚಾರವನ್ನು ನಿಯಂತ್ರಿಸುವುದು. ಹಾಗೂ ರಸ್ತೆ ಸುರಕ್ಷತೆ, ವಾಯು ಮಾಲಿನ್ಯದ ಬಗ್ಗೆ ಅರಿವು ಮೂಡಿಸುವುದು ಹಾಗೂ ಕಾಲಕಾಲಕ್ಕೆ ಮೇಲಾಧಿಕಾರಿಗಳಿಂದ ಬರುವ ಆದೇಶದಂತೆ ಕಾರ್ಯ ನಿರ್ವಹಿಸುವುದು.

**2.3). ಪ್ರಥಮ /ದ್ವಿತೀಯ ಸಹಾಯಕರು:-** ವಸೂಲಿಯಾದ ರಾಜಸ್ವವನ್ನು ಬ್ಯಾಂಕಿಗೆ ಜಮೆ ಮಾಡುವುದು ಸೇರಿದಂತೆ ಕಛೇರಿಯ ಎಲ್ಲಾ ಕಡತಗಳನ್ನು ಹಾಗೂ ವಹಿಗಳನ್ನು ನಿರ್ವಹಿಸುವುದು. ಮೇಲಾಧಿಕಾರಿಗಳ ಆದೇಶದಂತೆ ಕಾರ್ಯ ನಿರ್ವಹಿಸುವುದು.

**2.4). ಡಿ.ಗ್ರೂಪ್ ನೌಕರರು:-** ತನಿಖಾ ಠಾಣೆಯಿಂದ ಹಾದು ಹೋಗುವ ವಾಹನಗಳನ್ನು ನಿಲ್ಲಿಸಲು ಮೋಟಾರು ವಾಹನ ನಿರೀಕ್ಷಕರುಗಳಿಗೆ ಸಹಾಯ ಮಾಡುವುದು ವಾಹನ ಚಾಲಕರನ್ನು ನಿಯಂತ್ರಿಸುವುದು. ಹಾಗೂ ಮೇಲಾಧಿಕಾರಿಗಳ ಆದೇಶದಂತೆ ಕಾರ್ಯ ನಿರ್ವಹಿಸುವುದು.

**3) . ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆಯ ಮಾರ್ಗಗಳು ಸೇರಿದಂತೆ ತೀರ್ಮಾನ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಅನುಸರಿಸಬೇಕಾದ ಕಾರ್ಯ ವಿಧಾನಗಳು**

ಈ ಕಛೇರಿಯು ತನಿಖಾ ಠಾಣೆ ಆಗಿದ್ದು, ತನಿಖಾ ಠಾಣೆಯ ಮುಖ್ಯ ಉದ್ದೇಶ ಹೊರ ರಾಜ್ಯದಿಂದ ಬರುವ ಸಾರಿಗೆ ವಾಹನಗಳಿಗೆ ತಾತ್ಕಾಲಿಕ ಹಾಗೂ ವಿಶೇಷ ರಹದಾರಿ ನೀಡುವುದರ ಜೊತೆಗೆ ರಾಜಸ್ವ ವಸೂಲಾತಿಗೊಳಿಸುವುದು. ಮೋಟಾರು ವಾಹನ ಕಾಯ್ದೆ ನಿಯಮಗಳನ್ನು ಉಲ್ಲಂಘನೆಗೊಳಿಸಿದಂತಹ ವಾಹನಗಳ ವಿರುದ್ಧ ತನಿಖಾ ವರದಿ ನೀಡಿ ರಾಜೀದಂಡ ಹಾಗೂ ತೆರಿಗೆ ವಸೂಲಾತಿ ಮಾಡುವುದು.

ರಹದಾರಿ ವಿತರಣೆ ಪ್ರಕರಣಗಳ ವಿಲೇವಾರಿಗೊಳಿಸುವ ಸಂದರ್ಭದಲ್ಲಿ ಕಛೇರಿ ಮುಖ್ಯಸ್ಥರ ತೀರ್ಮಾನ ಅಂತಿಮವಾಗಿರುತ್ತದೆ, ಹಾಗೂ ರಾಜ್ಯಕ್ಕೆ ಬರಬೇಕಾದ ತೆರಿಗೆಯನ್ನು ಸೋರಿಕೆ ಆಗದಂತೆ ಮುತವರ್ಜಿವಹಿಸಿ ರಾಜಸ್ವ ಸಂಗ್ರಹಣೆ ಮಾಡುವುದು.

ದಿನನಿತ್ಯ ಸಂಗ್ರಹಣೆಗೊಂಡ ರಾಜಸ್ವ ಹಣವನ್ನು ದಿನಂಪ್ರತಿ ಖಜಾನೆಗೆ ತುಂಬುವುದು ಆಂತಿಮವಾಗಿ ಸಾರಿಗೆ ಆಯುಕ್ತರಿಂದ ನಿಗಧಿಗೊಳಿಸಿದ ರಾಜಸ್ವ ಗುರಿಯನ್ನು ತಲುಪುವ ನಿಟ್ಟಿನಲ್ಲಿ ಕಾರ್ಯನಿರ್ವಾಹಕ ಸಿಬ್ಬಂದಿಗಳೊಂದಿಗೆ ಸಮಗ್ರವಾದ ರೀತಿಯಲ್ಲಿ ಪ್ರವರ್ತನ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವ ಹೊಣೆಗಾರಿಕೆಯನ್ನು ನಿರ್ದೇಶಿಸಲಾಗುತ್ತದೆ.

**4) ಅದರ ಕಾರ್ಯಗಳ ನಿರ್ವಹಣೆಗೆ ಅದು ರೂಪಿಸಿರುವ ಸೂತ್ರಗಳು:-**

ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಮತ್ತು ಅವರ ಅಧೀನದಲ್ಲಿ ಬರುವ ಸಿಬ್ಬಂದಿಯವರು ಈ ಕೆಳಕಂಡ ಕಾಯ್ದೆ ಮತ್ತು ನಿಯಮದಡಿಯಲ್ಲಿ ಕರ್ತವ್ಯ ನಿರ್ವಹಿಸಲಾಗುತ್ತದೆ.

4.1). ಕೇಂದ್ರ ಮೋಟಾರು ವಾಹನಗಳ ಕಾಯ್ದೆ 1988

4.2). ಕೇಂದ್ರ ಮೋಟಾರು ವಾಹನಗಳ ಕಾಯ್ದೆ ನಿಯಮಗಳು 1989

4.3). ಕರ್ನಾಟಕ ಮೋಟಾರು ವಾಹನ ನಿಯಮಗಳು, 1989

4.4). ಕರ್ನಾಟಕ ಮೋಟಾರು ವಾಹನ ತೆರಿಗೆ ಕಾಯ್ದೆ ಮತ್ತು ನಿಯಮಗಳು 1957 ಮತ್ತು ಸಂಬಂಧಿಸಿದ ತಿದ್ದುಪಡಿಗಳು.

**5) ಅದರ ಕಾರ್ಯಗಳನ್ನು ನೆರವೇರಿಸುವುದಕ್ಕಾಗಿ ಅದು ಹೊಂದಿರುವ ಅಥವಾ ಅದರ ನಿಯಂತ್ರಣದಲ್ಲಿರುವ ಅಥವಾ ಅದರ ಉದ್ಯೋಗಿಗಳು ಬಳಸುವ ನಿಯಮಗಳು, ಉಪ ನಿಯಮಗಳು, ಅನುಸೂಚಿಗಳು, ಕೈಪಿಡಿಗಳು ಮತ್ತು ದಾಖಲೆಗಳು:**

5.1). ಕೇಂದ್ರ ಮೋಟಾರು ವಾಹನಗಳ ಕಾಯ್ದೆ 1988

5.2). ಕೇಂದ್ರ ಮೋಟಾರು ವಾಹನಗಳ ಕಾಯ್ದೆ ನಿಯಮಗಳು 1989

5.3). ಕರ್ನಾಟಕ ಮೋಟಾರು ವಾಹನ ನಿಯಮಗಳು, 1989

5.4). ಕರ್ನಾಟಕ ಮೋಟಾರು ವಾಹನ ತೆರಿಗೆ ಕಾಯ್ದೆ ಮತ್ತು ನಿಯಮಗಳು 1957 ಮತ್ತು ಸಂಬಂಧಿಸಿದ ತಿದ್ದುಪಡಿಗಳು.

**6). ಅದರ ಕಾರ್ಯನೀತಿಯ ರಚನೆ ಅಥವಾ ಅದರ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರೊಡನೆ ಸಮಾಲೋಚಿಸಲು ಅಥವಾ ಅದರ ಪ್ರಾತಿನಿಧ್ಯವಿರುವಂತೆ ಮಾಡಲು ಇರುವಂತಹ ಯಾವುದೇ ವ್ಯವಸ್ಥೆಯ ವಿವರಗಳು:**

-ಇಲ್ಲ-

**7). ಮಂಡಳಿಗಳು, ಪರಿಷತ್ತುಗಳು, ಸಮಿತಿಗಳು ಅಥವಾ ಇತರ ನಿಯಮಗಳು ಮತ್ತು ಅದರ ಭಾಗವಾಗಿ ಅಥವಾ ಅದರ ಸಲಹೆಯ ಉದ್ದೇಶಕ್ಕಾಗಿ ರಚಿತವಾದ ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳನ್ನೊಳಗೊಂಡ ಮಂಡಳಿಗಳ, ಪರಿಷತ್ತುಗಳ, ಸಮಿತಿಗಳ ಮತ್ತು ಇತರ ನಿಯತಕಾಲಿಕ ಸಭೆಗಳು ಸಾರ್ವಜನಿಕರಿಗೆ ಮುಕ್ತಾವಾಗಿರುತ್ತವೆಯೋ ಅಥವಾ ಅಂತಹ ಸಭೆಗಳ ನಡಾವಳಿಗಳು ಸಾರ್ವಜನಿಕರಿಗೆ ದೊರೆಯುತ್ತವೆಯೋ ಎಂಬುದರ ವಿವರ ಪಟ್ಟಿ:–**

ಸಹಾಯಕ ಪ್ರಾದೇಶಿಕ ಸಾರಿಗೆ ಪ್ರಾದಿಕಾರ ಕಲಬುರಗಿರವರು ನೀಡುವ ಪ್ರಾಧಿಕಾರದ ನಿಯಮದಂತೆ ಮೋಟಾರು ವಾಹನ ಕಾಯ್ದೆ 1988 ಸೆಕ್ಷನ್ 68(1) ರ ಅಡಿಯಲ್ಲಿ ಸಾರಿಗೆ ವಾಹನಗಳ ರಹದಾರಿ ನೀಡುವ ಅಧಿಕಾರ ಹೊಂದಿರುತ್ತಾರೆ.

1) **ಅಧ್ಯಕ್ಷರು** : ಜಿಲ್ಲಾಧಿಕಾರಿಗಳು, ಕಲಬುರಗಿ

2) **ಸದಸ್ಯರು** : ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳು, ಕಲಬುರಗಿ

3) **ಕಾರ್ಯದರ್ಶಿ:** ಉಪ ಸಾರಿಗೆ ಆಯುಕ್ತರು ಮತ್ತು ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿ, ಕಲಬುರಗಿ

4) **ಹೆಚ್ಚುವರಿ ಕಾಯರ್ಾದರ್ಶಿ** : ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಆಳಂದ ತನಿಖಾಠಾಣೆ, ಆಳಂದ

**8). ತನಿಖಾ ಠಾಣೆಯ ಅಧಿಕಾರಿಗಳ ಮತ್ತು ನೌಕರರ ನಿರ್ದೇಶಿಕೆ :**

| ಪದನಾಮ | ಹುದ್ದೆ | ವಿಳಾಸ |
|---|---|---|
| ಶ್ರೀ ಸಿ.ಈರಣ್ಣ | ಪ್ರಭಾರಿ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು | ಆಳಂದ ತನಿಖಾ ಠಾಣೆ, ಆಳಂದ, ಕಲಬುರಗಿ ಜಿಲ್ಲೆ |

9.1 ಹಿರಿಯ ಮೋಟಾರು ವಾಹನ ನಿರೀಕ್ಷಕರು ಸರದಿಯ ಮೇಲೆ ಕೇಂದ್ರ ಕಛೇರಿ ಆದೇಶದ ಮೇರೆಗೆ ಕಾರ್ಯ ನಿರ್ವಹಿಸುತ್ತಾರೆ.

9.2 ಶ್ರೀ ಗೋಪಿಚಂದ, ದ್ವಿತಿಯ ದರ್ಜೆ ಸಹಾಯಕರು ನಿಯೋಜನೆ ಮೇರೆಗೆ ತನಿಖಾ ಠಾಣೆಯಲ್ಲಿ ಕಾರ್ಯ ನಿರ್ವಹಿಸುತ್ತಾರೆ.

10). ಅದರ ವಿ.ನಿಯಮಗಳಲ್ಲಿ ಉಪ ಸಂಧಿಸಿರುವಂತೆ ಪರಿಹಾರ ವ್ಯವಸ್ಥೆಯೂ ಸೇರಿದಂತೆ ಅದರ ಪ್ರತಿಯೊಬ್ಬ ಅಧಿಕಾರಿ ಮತ್ತು ನೌಕರರು ಪಡೆಯುವ ತಿಂಗಳ ಗೌರವಧನ:

| ಪದನಾಮ | ಹುದ್ದೆ | ಮೂಲವೇತನ |
|---|---|---|
| ಶ್ರೀ ಸಿ.ಈರಣ್ಣ | ಪ್ರಭಾರಿ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು | - - |

11). ಎಲ್ಲಾ ಯೋಜನೆಗಳ ವಿವರಗಳನ್ನು ಸೂಚಿಸುವ, ಪ್ರಸ್ತಾವಿತ ವೆಚ್ಚಗಳನ್ನು ಮತ್ತು ಮಾಡಲಾದ ಬಡವಾಟೆಗಳ ವರದಿಯನ್ನು ಸೂಚಿಸಿ : ಅದರ ಪ್ರತಿಯೊಂದುಏಜೆನ್ಸಿಗೆ ಹಂಚಿಕೆ ಮಾಡಲಾದ ಆಯವ್ಯಯ.

**ಅನುದಾನ ಬಿಡುಗಡೆ 2020-21 ರವರೆಗೆ**

| ಲೆಕ್ಕ ಶೀರ್ಷಿಕೆ | ಅನುದಾನ ಬಿಡುಗಡೆ | ಖರ್ಚಿನ ಬಾಬ್ತು | ಶಿಲ್ಕು. |
|---|---|---|---|
| 051 ಕಛೇರಿ ವೆಚ್ಚ | ರೂ. 380508/- | ರೂ. 380508/- | -- |
| 071 ಕಚೇರಿ ವೆಚ್ಚ | ರೂ. 84636/- | ರೂ. 84636/- | -- |
| 195 ಸಾರಿಗೆ ವೆಚ್ಚ | -- | -- | -- |

12) ಹಂಚಿಕೆ ಮಾಡಲಾದ ಮೊಬಲಗನ್ನೊಳಗೊಂಡು, ಸಹಾಯ ಧನ ಕಾರ್ಯಕ್ರಮಗಳ ಜಾರಿಯ ವಿಧಾನವನ್ನು ಮತ್ತು ಅಂತಹ ಕಾರ್ಯಕ್ರಮಗಳ ಫಲಾನುಭವಿಗಳ ವಿವರಗಳು :

- ಅನ್ವಯಿಸುವುದಿಲ್ಲ-

13) ಅದು ನೀಡಿರುವ ರಿಯಾತಿಗಳನ್ನು ಅನುಮತಿ ಪತ್ರಗಳನ್ನು ಅಥವಾ ಅಧಿಕಾರ ಪತ್ರಗಳನ್ನು ಪಡೆಯುವವರ ವಿವರಗಳು :-

- ಅನ್ವಯಿಸುವುದಿಲ್ಲ-

14). ಅದರ ಬಳಿ ಲಭ್ಯವಿರುವ ಅಥವಾ ಅದು ಹೊಂದಿರುವ ವಿದ್ಯುನ್ಮಾನ ರೂಪಕ್ಕೆ ಪರಿವರ್ತಿಸಿರುವ ಮಾಹಿತಿಗೆ ಸಂಬಂಧಿಸಿದ ವಿವರಗಳು :-

ಈ ತನಿಖಾ ಠಾಣೆಯು ಇದುವರೆಗೆ ಸಂಪೂರ್ಣ ಗಣಕೀಕರಣಗೊಂಡಿರುವದಿಲ್ಲ

15). ಸಾರ್ವಜನಿಕ ಉಪಯೋಗಕ್ಕಾಗಿ ಗ್ರಂಥಾಲಯವನ್ನು ಅಥವಾ ವಾಚನಾಲಯವನ್ನು ನಿರ್ವಹಿಸುತ್ತಿದ್ದಲ್ಲಿ ಅದರ ಕೆಲಸದ ಸಮಯವನ್ನೊಳಗೊಂಡಂತೆ ಮಾಹಿತಿ ಪಡೆಯಲು ಸಾರ್ವಜನಿಕರಿಗೆ ಲಭ್ಯವಿರುವ ಸೌಲಭ್ಯಗಳ ವಿವರಗಳು :

**ಕಛೇರಿ ಸಮಯ:–** ತನಿಖಾ ಠಾಣೆ ದಿನವಿಡಿ 24 ಗಂಟೆ ಕಾಲ ಕಾರ್ಯನಿರ್ವಹಿಸುತ್ತದೆ. ಸಾರ್ವಜನಿಕರ ಉಪಯೋಗಕ್ಕಾಗಿ ಗ್ರಂಥಲಯ ಅಥವಾ ವಾಚನಾಲಯ ಈ ವರಗೆ ಅಸ್ಥಿತ್ವದಲ್ಲಿರುವುದಿಲ್ಲ.

**16). ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರುಗಳು. ಪದನಾಮಗಳು ಮತ್ತು ಇತರ ವಿವರಗಳು :–**

**16.1) ಸಾರ್ವಜನಿಕ ಮಾಹಿತಿಅಧಿಕಾರಿ** - ಶ್ರೀ ಸಿ.ಈರಣ್ಣ, ಪ್ರಭಾರಿ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಆಳಂದ ತನಿಖಾಠಾಣೆ, ಆಳಂದ.

**16.2) ಮೇಲ್ಮನವಿ ಪ್ರಾಧಿಕಾರ –** ಶ್ರೀ ಸಿ.ಮಲ್ಲಿಕಾರ್ಜುನ, ಜಂಟಿ ಸಾರಿಗೆಆಯುಕ್ತರು, ಕಲಬುರಗಿ ವಿಭಾಗ, ಕಲಬುರಗಿ, ಆರ್.ಟಿ.ಓ. ಆಫೀಸ್ ಕಂಪೌಂಡ, ಸೇಡಂ ರಸ್ತೆ, ಕಲಬುರಗಿ

ಅ) ಈ ಕಛೇರಿಗೆ 2020-21ನೇ ಸಾಲಿನಲ್ಲಿ ಒಟ್ಟು ರೂ. 12000000/- ರಾಜಸ್ವ ಗುರಿ ನಿಗಧಿಪಡಿಸಲಾಗಿದ್ದು, ಅದರಲ್ಲಿ ಒಟ್ಟು ರೂ. 7959757/- ನ್ನು ವಸೂಲಿ ಮಾಡಲಾಗಿದ್ದು, , ಪ್ರತಿಶತ 66.13% ರಷ್ಟು ಆಗಿರುತ್ತದೆ. ಮತ್ತು 01.01.2020 ರಿಂದ 31.12.2020ರ ಅವಧಿಗೆ ರೂ. 7574628/-ರಷ್ಟು ರಾಜಸ್ವ ವಸೂಲಿಸಲಾಗಿದೆ

ಕೇಂದ್ರ ಕಛೇರಿಯಾದ ಮಾನ್ಯ ಸಾರಿಗೆ ಆಯುಕ್ತರ ಕಛೇರಿ, ಬೆಂಗಳೂರಿನಿಂದ ಬಿಡುಗಡೆಯಾದ ವೆಬ್ ಸೈಟ್ **www.artoaland@gmail.com** ರಲ್ಲಿ ಸಾರ್ವಜನಿಕರು ತಮ್ಮ ಕೆಲಸ ಕಾರ್ಯಗಳಿಗೆ ಅನುಸರಿಸಬೇಕಾದ ಸೂಕ್ತ ಮಾರ್ಗದರ್ಶನ ಪ್ರಕಟಿಸಲಾಗಿದೆ.

ಸಾರ್ವಜನಿಕ ಮಾಹಿತಿ ಅಧಿಕಾರಿ
ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ,
ಆಳಂದ ತನಿಖಾ ಠಾಣೆ ಕಲಬುರಗಿ.